Taluk, has been instructed to indent the required books for Nippani Taluk; if not already indented and cause the supply of the required Marathi Text Books to the students.

Arrangements are made to supply the required Text Books in Marathi Language for Nippani Constituency before the 15th of August, 1985.

(೭) ಪೆರ್ಮನ್ನೂರು ಗ್ರಾಮಕ್ಕೆ ನೀರು ಸರಬರಾಜು ಯೋಜನೆ

ಶ್ರೀ ಬಿ. ಎಂ. ಇದಿನಬ್ಬ.—ಅಧ್ಯಕ್ಷರೆ, ಮಂಗಳೂರು ತಾಲ್ಲೂಕಿನ ಉಳ್ಳಾಲ ಕ್ಷೇತ್ರದ ಪೆರ್ಮನ್ನೂರು ಗ್ರಾಮದ, ನಲ್ಲಿ ನೀರು ಯೋಜನೆಗೆ ಓವರ್ ಟ್ಯಾಂಕ್ ಕಟ್ಟಿ ನೀರು ಒದಗಿಸಲು ಹಿಂದೆಯೇ ಮಂಜೂರಾಗಿದೆ. ಆದರೆ ಓವರ್ ಟ್ಯಾಂಕ್ ಕಟ್ಟುವುದು ಅರ್ಧದಲ್ಲೇ ನಿಂತಿದೆ. ಏಕಾಗಿ ಹೀಗಾಗಿದೆ ಎಂಬುದು ತಿಳಿದಿಲ್ಲ. ಗ್ರಾಮದ ಜನರು ನಿರಿಗಾಗಿ ಪರದಾಡುತ್ತಿದ್ದಾರೆ. ಆದಷ್ಟು ಶೀಘ್ರ ಓವರ್ ಟ್ಯಾಂಕ್ ಕಟ್ಟಿ ಪೆರ್ಮನ್ನೂರು ಗ್ರಾಮಕ್ಕೆ ಸರಿಯಾಗಿ ನೀರು ಒದಗಿಸುವುದು ಅತೀ ಜರೂರಾಗಿರುತ್ತದೆ. ಈ ಕಾರಿತು ಗ್ರಾಮಾಭಿವೃದ್ಧಿ ಸಚಿವರ ಗಮನವನ್ನು ಈ ಮೂಲಕ ಸೆಳೆಯು ಬಯಸುತ್ತೇನೆ.

ಶ್ರೀ ಯಾನಗಲ್.—ಅಧ್ಯಕ್ಷರೆ, ನಾನು ಈ ವಿಚಾರದ ಬಗ್ಗೆ ಪರಿಶೀಲನೆ ಮಾಡಲಿಕ್ಕೆ ಹೇಳುತ್ತೇನೆ.

(೮) ಬೆಂಗಳೂರಿನ ಅಲೆಂಬಿಕ್ ಗ್ಲಾಸ್ ಕಾರ್ಖಾನೆಗೆ ನೀರು ಸರಬರಾಜು

ಶ್ರೀ ಪಂಪಾಪತಿ.—ಅಧ್ಯಕ್ಷರೆ, ಬೆಂಗಳೂರು ನಗರದ ಅಲೆಂಬಿಕ್ ಗಾಜು ಕಾರ್ಖಾನೆಯನ್ನು ಅದರ ಆಡಳಿತ ವರ್ಗ ತಾರೀಖು ೧೫ನೇ ನವೆಂಬರ್ ೧೯೮೪ರಿಂದ ವಿದ್ಯುಚ್ಛಕ್ತಿ ಅಭಾವದ ನೆಪ ಒಡ್ಡಿದ್ದಾರೆ. ತಾ. ೧೭ನೇ ಜೂನ್ ೧೯೮೫ರಂದು ಸರಕಾರದ ಪರವಾಗಿ ಸರಕಾರಿ ಪ್ಲೀಡರ್‌ರವರು ವಿದ್ಯುಚ್ಛಕ್ತಿಯನ್ನು ಸದರಿ ಕಾರ್ಖಾನೆಗೆ ಒದಗಿಸಲು ಸಿದ್ಧವಾಗಿರುವುದಾಗಿ ಕರ್ನಾಟಕ ಶ್ರೇಷ್ಠ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದರು ಆದಕ್ಕೆ ಆಗಸ್ಟ್, ಮೊದಲನೆ ತಾರೀಖಿನಿಂದಲೇ ವಿದ್ಯುಚ್ಛಕ್ತಿಯನ್ನು ಒದಗಿಸುವುದಾಗಿ ಸರಕಾರ ತಿಳಿಸಿದೆ. ವಿದ್ಯುಚ್ಛಕ್ತಿ ಇಲಾಖೆಯು ತನ್ನ ಸಿ.ಐ.ಎಂ. ೧ ಎಚ್ ಸಿ ಇ ಸಿ ವೈ ಎಸ್ ೧೬೫೧ ಉಳ್ಳ ಪತ್ರದ ಮುಖೇನ ಅಲೆಂಬಿಕ್ ಆಡಳಿತ ವರ್ಗಕ್ಕೆ ವಿದ್ಯುತ್ ಸರಬರಾಜಿನ ಬಗ್ಗೆ ತಾ. ೩೦ನೇ ಜುಲೈ ೧೯೮೫ರಲ್ಲಿ ತಿಳಿಸಿದ್ದಾರೆ. ಆದರೂ ಅಲೆಂಬಿಕ್ ಪೂಲೀಕ ವರ್ಗ ಕಾರ್ಖಾನೆಯನ್ನು ಇನ್ನೂ ತೆರೆದಿಲ್ಲ. ಅಲ್ಲದೆ ಇತ್ತೀಚೆಗೆ ತಮ್ಮ ತಾ. ೬ನೇ ಆಗಸ್ಟ್ ೧೯೮೫ರ ನೋಟೀಸ್ ಮೂಲಕ ಜುಲೈ ತಿಂಗಳ ಲೇ ಆಫ್ ಸಂಬಳವನ್ನು ಕೊಡಲು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ. ಅಲೆಂಬಿಕ್ ಕಾರ್ಮಿಕರು ಬಹಳ ತೊಂದರೆಯಲ್ಲಿ ಇದ್ದಾರೆ. ಕೆಲಸಗಾರರು ಶಾಂತಿಯುತವಾಗಿದ್ದರೂ ಸಹ ಪೋಲೀಸರು ೪ ವ್ಯಾನುಗಳನ್ನು ಕಾರ್ಖಾನೆಯ ಮುಂದೆ ನಿಲ್ಲಿಸಿದ್ದಾರೆ. ಈ ಸದನದಲ್ಲಿ ಈ ಪರಿಸ್ಥಿತಿಯ ಬಗ್ಗೆ ತಿಳಿಸಲು ಅಧ್ಯಕ್ಷರ ಅನುಮತಿಯನ್ನು ಕೋರುತ್ತೇನೆ. ಈ ಪರಿಸ್ಥಿತಿಯ ಬಗ್ಗೆ ಸದನದಲ್ಲಿ ತಿಳಿಸುವುದು ಏನೆಂದರೆ, ಅಲ್ಲಿನ ಕಾರ್ಮಿಕರಿಗೆ ರಕ್ಷಣೆ ಕೊಡುವ ಬದಲು ಪೂಲೀಕರಿಗೆ ರಕ್ಷಣೆ ಕೊಟ್ಟು ಕಾರ್ಮಿಕರನ್ನು ತೊಂದರೆಗೆ ಈಡು ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ಕಾರ್ಮಿಕ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಡಿ. ಪುಂಜುನಾಥ್.—ಅಧ್ಯಕ್ಷರೆ, ಈ ಕಾರ್ಖಾನೆಯವರು ವಿದ್ಯುಚ್ಛಕ್ತಿ ಕೊರತೆಯಿಂದ ನಾವು ಮುಚ್ಚಬೇಕಾಗಿದೆ, ಅದಕ್ಕೆ ಸರ್ಕಾರದಿಂದ ಪರ್‌ಮಿಷನ್ ಕೊಡಬೇಕೆಂದು ಅರ್ಜಿ ಹಾಕಿದ್ದರು. ನಾವು ಅದನ್ನು ರಿಜೆಕ್ಟ್ ಮಾಡಿದ್ದೇವೆ. ಅವರು ನಮ್ಮ ಆರ್ಡರ್ ಮೇಲೆ ಹೈಕೋರ್ಟ್‌ನಲ್ಲಿ ಚಾಲೆಂಜ್ ಮಾಡಿದ್ದಾರೆ. ಅಲ್ಲಿ ಇನ್ನೂ ತೀರ್ಮಾನ ಆಗಿಲ್ಲ. ನಾವು ವಿದ್ಯುಚ್ಛಕ್ತಿ ಇಲಾಖೆಯವರಿಗೆ ಮೊದಲು ಆಪರಿಗೆ ವಿಷ್ಟು ವಿದ್ಯುಚ್ಛಕ್ತಿ ಕೊಡುತ್ತಿದ್ದರು ಅಷ್ಟು ವಿದ್ಯುಚ್ಛಕ್ತಿ ಕೊಡಬೇಕೆಂದು ಹೇಳಿದ್ದೇವೆ. ಅಲ್ಲದೆ ಈ ಕಾರ್ಖಾನೆಯವರನ್ನು ಕರೆಸಿ ಲೇ ಆಫ್ ಚಾರ್ಜ್ ಮಾಡಲಿಕ್ಕೆ ಹೇಳಿದ್ದೇವೆ. ಈಗ ಮಾನ್ಯ ಸದಸ್ಯರು ಲೇ ಆಫ್ ಚಾರ್ಜ್ ಮಾಡುವುದನ್ನು ನಿಲ್ಲಿಸಿದ್ದಾರೆಂದು ಹೇಳಿದ್ದಾರೆ. ಆದು ನನಗೆ ಗೊತ್ತಿಲ್ಲ. ಆವರನ್ನು ಕರೆಸಿ ಮಾತನಾಡುತ್ತೇನೆ. ಇನ್ನು ಮಾನ್ಯ ಸದಸ್ಯರು ಕಾರ್ಖಾನೆ ಬಳಿ ಪೋಲೀಸ್ ವ್ಯಾನ್ ನಿಲ್ಲಿಸಿದ್ದೀರಾ ಎಂದು ಹೇಳಿದರು. ಅಲ್ಲಿ ಮೊದಲಿನಿಂದಲೂ ಪೋಲೀಸ್ ವ್ಯಾನ್ ಇತ್ತು ಎಂದು ಕಾಣುತ್ತದೆ. ನಾವು ಯಾವ ರೀತಿಯಲ್ಲೂ ಪೂಲೀಕರಿಗೆ ರಕ್ಷಣೆ ಕೊಟ್ಟಿಲ್ಲ. ಕಾರ್ಮಿಕರ ಹಿತರಕ್ಷಣೆಯನ್ನು ಕಾಪಾಡಿದ್ದೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ಇಷ್ಟಪಡುತ್ತೇನೆ.